## ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

## ಸಿ ಸಿ- *1038/2023*

| | | |
|---|---|---|
| ಪಿರ್ಯಾದಿ | | ಸಕಲೇಶಪುರ ನಗರ ಪೋಲೀಸ್ ಠಾಣೆ |
| | | ವಿರುದ್ಧ |
| ಆರೋಪಿ | 1 | ಸಾಧಿಕ್ |

<u>ದೋಷಾರೋಪಣೆ</u>

ನಾನು ಧನಲಕ್ಷ್ಮಿ. ಆರ್. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ ನಿಮ್ಮ ವಿರುದ್ದ ಈ ಕೆಳಗಿನಂತೆ ದೋಷಾರೋಪಣೆ ಹೊರಿಸಿರುತ್ತೇನೆ.

ಸಕಲೇಶಪುರ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಸಕಲೇಶಪುರ ತಾಲ್ಲೂಕು ಕಸಬಾ ಹೋಬಳಿ ಕೊಲ್ಲಹಳ್ಳಿ ಗ್ರಾಮದ ವಾಸಿಯಾದ ಚಾಸಾ-**2** ರವರ ವಾಸದ ಮನೆಯ ಹತ್ತಿರ ರಸ್ತೆಯಲ್ಲಿ ದಿಃ **22-09-2023** ಸಂಜೆ **5** ಗಂಟೆಯ ಸಮಯದಲ್ಲಿ ಚಾಸಾ-**1** ಮತ್ತು ಚಾಸಾ-**2** ರವರು ಮಾತನಾಡಿಕೊಳ್ಳುತ್ತಿದ್ದಾಗ ಆರೋಪಿಯಾದ ನೀವು ಯಾವುದೋ ದುರುದ್ದೇಶದಿಂದ ಚಾಸಾ-**1** ರವರಿಗೆ ಬೋಳಿ ಮಕ್ಕಳಾ ಎಂದು ಬೈದಿರುತ್ತೀರಾ ಎಂದು ಭಾ.ದಂ.ಸಂ. ಕಲಂ **504** ರೀತ್ಯಾ ನಿಮ್ಮ ವಿರುದ್ದ ದೋಷಾರೋಪಣೆ ಮಾಡಲಾಗಿದೆ.

ಎರಡನೆಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಸಾ-**1** ರವರಿಗೆ ಏಕಾಏಕಿ ತಮ್ಮ ಕೈಗಳಿಂದ ಚಾಸಾ-**1** ರವರ ಮೈ ಕೈಗೆ ಹೊಡೆದು ನೋವುಂಟುಪಡಿಸಿರುತ್ತೀರಿ ಎಂದು ಭಾ.ದಂ.ಸಂ. ಕಲಂ **323** ರೀತ್ಯಾ ನಿಮ್ಮ ವಿರುದ್ದ ದೋಷಾರೋಪಣೆ ಮಾಡಲಾಗಿದೆ.

ಮುರನೆಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ನಂತರ ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-**1** ರವರ ಎಡಕಣ್ಣಿನ ಮತ್ತು ಎಡಕೆನ್ನೆಯ ಹತ್ತಿರಕ್ಕೆ ಹೊಡೆದು ರಕ್ತಗಾಯಪಡಿಸಿರುತ್ತೀರಾ ಎಂದು ಭಾ.ದಂ.ಸಂ. ಕಲಂ **324** ರೀತ್ಯಾ ನಿಮ್ಮ ವಿರುದ್ದ ದೋಷಾರೋಪಣೆ ಮಾಡಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು, ನಂತರ ಜಗಳ ಬಿಡಿಸಲು ಹೋದ ಚಾಸಾ-**2** ರವರಿಗೂ ಸಹ ತನ್ನ ಕೈಗಳಿಂದ ಮುಖಕ್ಕೆ ಹೊಡೆದು ಚಾಸಾ-**1** ಮತ್ತು

ಚಾಸಾ**-2** ಇಬ್ಬರನ್ನು ಕುರಿತು ''ಈ ದಿನ ನೀವು ಬದುಕ್ಕಿದ್ದೀರಿ, ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ'' ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಾ ಎಂದು ಭಾ.ದಂ.ಸಂ. ಕಲಂ **506** ರೀತ್ಯಾ ನಿಮ್ಮ ವಿರುದ್ದ ದೋಷಾರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಎಲ್ಲಾ ಅಪರಾಧವು ನನ್ನ ಸಂಜ್ಞಾನಕ್ಕೊಳಪಟ್ಟಿದ್ದು ಈ ನ್ಯಾಯಾಲಯದಲ್ಲಿ ಅಧಿವಿಚಾರಣೆಯಾಗುತ್ತದೆ.

ಪ್ರಶ್ನೆ.1. ಈಗ ಓದಿ ವಿವರಿಸಿ ಹೇಳಿದ ನಿಮ್ಮ ಮೇಲಿನ ದೋಷಾರೋಪಣೆ ಅರ್ಥವಾಯಿತೇ ?
ಉತ್ತರ .

ಆ.1

ಪ್ರಶ್ನೆ.2. ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛೀಸುವಿರೋ ?
ಉತ್ತರ .

ಆ.1

*(ದೋಷಾರೋಪಣೆಯ ವಿವರಗಳನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ನಮೂದಿಸಿದೆ ಎಂದು ಧೃಡೀಕರಿಸಿದೆ.)*

***ದಿನಾಂಕಃ16-02-2024***

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.